

ತಲೆ ಹೊಡೆದ್ರೆ ಇಂಥ ಹತ್ತು ಟೂರ್ ಮಾಡಬಹುದು ಅಷ್ಟು ದುಡ್ಡು ದುಡೀತೀರಾ' ಎಂದು ರೇಗಿಸಿದೆ. ಇಬ್ಬರೂ ಅದೆಷ್ಟು ಹಾಸ್ಯಪ್ರಿಯರೆಂದರೆ, ಪ್ರತಿ ಮಾತಲ್ಲೂ ಹಾಸ್ಯ ಹೆಕ್ಕಿ ತೆಗೆಯುತ್ತಿದ್ದರು. ಊಟದ ನಡುವೆ ನನ್ನ ಫಜೀತಿಯ ಕೆಲ ಪ್ರಸಂಗಗಳನ್ನು ಹೇಳಿದಾಗ ಮಕ್ಕಳಂತೆ ಬಿದ್ದೂ ಬಿದ್ದೂ ನಕ್ಕಿದ್ದರು. ಈಗ ನೋಡಿದರೆ ಮಂಗಗಳ ಜೊತೆಗಿನ ನನ್ನ ಮಂಗಾಟವನ್ನು ಚಿತ್ರೀಕರಿಸಿ ಸುಖ ಪಡೆಯುತ್ತಿದ್ದಾರೆ.

'ನೀವು ಹೊರಗೆ ಹೋಗೋವಾಗ ಗಾಜಿನ ಕಿಟಕಿ, ಮುಂದಿನ ಬಾಗಿಲು ಭದ್ರ ಹಾಕಿಕೊಂಡು ಹೋಗಿ ಸರ್ ಎಂದು ನಾನು ಎಚ್ಚರಿಕೆ ಕೊಟ್ಟಿದ್ದೆನಲ್ಲ! ಇಲ್ಲಿನ ರಿಸಸ್ ಮಂಕಿಗಳು ತುಂಬಾ ಡೇಂಜರ್. ರೌಡಿಗಳ ಥರ ರೂಮಿಗೆ ನುಗ್ಗಿ ದಾಂಧಲೆ ಮಾಡ್ತಾವೆ. ನೋಡಿ ಕಬ್ಬಿಣದ ತಂತಿ ಜಾಲರಿ ಕಿತ್ತಾಕಿ ಬಂದಿದ್ದಾವೆ ಎಂದರೆ ಎಷ್ಟು ಧೈರ್ಯ ಇವುಕ್ಕೆ? ಥೂ... ಈ ಅನಿಷ್ಟಾನ ಬಾಚಬೇಕಲ್ಲ, ನೋಡಿ ಹೆಂಗೆ ಗಬ್ಬು ನಾತ ಹೊಡೀತಿದೆ' ಎಂದು ರೂಮಿನ ದೇಖಾರೇಕಿ ಮಾಡುವಾತ ಬಂದು ಕೂಗಿದ. 'ಭಕ್ಷೀಶು ಜಾಸ್ತಿ ಕೊಡುತ್ತೇನೆ ತಂದೆ. ಮೊದಲು ಈ ಫಜೀತೀನಾ ಸರಿ ಮಾಡು. ಮಧ್ಯಾಹ್ನದ ಸಫಾರಿಗೆ ಹೊರಡಬೇಕು. ತಾಯಿ ಹುಲಿ ಇರೋ ಜಾಗ ಗೊತ್ತಾಗಿದೆಯಂತೆ. ಇನ್ನು ಸ್ನಾನ ಕೂಡ ಮಾಡಕ್ಕಾಗಲ್ಲ. ಊಟಕ್ಕೂ ಟೈಮಿಲ್ಲ' ಎಂದು ಕಳವಳಿಸಿದೆ.

ಅಷ್ಟರಲ್ಲಿ ಗೆಳೆಯ ಸುದರ್ಶನ, 'ಏನಾಯಿತು ಬ್ರದರ್' ಎಂದು ಬಂದವನು ಅವಾಕ್ಕಾಗಿ ನಿಂತ. ಅವನು ಜತನದಿಂದ ತಂದ ಪೌಡರು, ಪೇಸ್ಟು, ಸೆಂಟಿನ ಬಾಟಲು, ಇಸ್ತ್ರಿ ಮಾಡಿದ ಬಟ್ಟೆ ಎಲ್ಲವನ್ನೂ ಮರ್ಕಟಗಳು ಮಟಾಶ್ ಮಾಡಿದ್ದವು. ನನ್ನ ಅನೇಕ ವಸ್ತುಗಳು ಕಾಣೆಯಾಗಿದ್ದವು. ಕ್ಯಾಮೆರಾ ಪರಿಕರಗಳ ಎಳೆದು ಬೀಳಿಸಿದ್ದವು. ರೂಮು ಯುದ್ಧ ಮುಗಿಸಿದ ರಣರಂಗವಾಗಿತ್ತು. 'ಈ ಸ್ಟೀಲ್ ಮೆಶ್ ಕಿತ್ಕೊಂಡು ಕೋತಿಗಳು ಒಳಗೆ ನುಗ್ಗಿ ಬರೋ ಛಾನ್ಸೇ ಇಲ್ಲ ಎಂದು ನಾವು ಮಾತಾಡಿದ್ದು, ಕೋತಿಗಳು ಕೇಳಿಸಿಕೊಂಡೇ ದಂಗೆ ಎದ್ದಿದ್ದಾವೆ ಬ್ರದರ್' ಎಂದು ಸುದಿ ನಕ್ಕ.

ನಾನು ಬರುವುದಿಲ್ಲ ಎಂದರೂ 'ನೀನು ಬರಲೇಬೇಕು ಬ್ರದರ್' ಎಂದು ಒತ್ತಾಯಿಸಿ ಮಿತ್ರ ಸುದರ್ಶನ ನನ್ನ ಜಿಮ್ ಕಾರ್ಬೆಟ್ ಕಾಡಿಗೆ ಎತ್ತಾಕಿಕೊಂಡು ಬಂದಿದ್ದ. ಕಾಡಿಗೆ ಯಾರೇ, ಯಾವ ಹೊತ್ತಿನಲ್ಲೇ, ಯಾವ ಸ್ಥಿತಿಯಲ್ಲೇ ಕರೆದರೂ ಕೋತಿಯಂತೆ ಕುಣಿಯುತ್ತಾ ಹೋಗುವ ನಾನು ದಿಕಾಲ ರೇಂಜಿನ ಮಂಗಗಳ ಎದುರು ಸೋತಿದ್ದೆ. ದಿಕಾಲ ಜಿಮ್ ಕಾರ್ಬೆಟ್ ಅಭಯಾರಣ್ಯದ ಹಾಟ್ ಸ್ಪಾಟ್. ವನ್ಯಪ್ರಿಯರ ಕನಸಿನ ತಾಣ. ಕಾರಣ ಈ ಜಾಗೆಯಲ್ಲಿ ಹೆಚ್ಚು ಹುಲಿಗಳು ನೆಲೆಸಿವೆ. ಪ್ರಸಿದ್ಧಿ ಪಡೆದಿರುವ ಹೆಣ್ಣು ಹುಲಿ ಪಾರ್ವಾಲಿ ಕೂಡ ಇಲ್ಲಿಯವಳೇ. ನಾನು ಐದು ವರ್ಷದ ಹಿಂದೆ ಬಂದಾಗ ಇದೇ ರಾಮಗಂಗಾ ನದಿ ಆಚೆಗಿನ ಭಾಂಗ್‌ವಾಲ ಎಂಬಲ್ಲಿ ಇವಳ ನೋಡಿದ್ದೆ. ಇಲ್ಲಿ ಭಾಂಗ್ ಎಂದರೆ ಗಾಂಜಾ ಗಿಡಗಳು ಎಂದರ್ಥ. ಈ ಕಾಡಿನಲ್ಲಿ ಗಾಂಜಾ ಬೆಳೆ ಲಂಗುಲಗಾಮಿಲ್ಲದಷ್ಟು ಹೇರಳವಾಗಿದೆ. ನಾ ಆಗ ಕಂಡಾಗ ಪಾರ್ವಾಲಿಗೆ